


ಮಾಧ್ಯಮಲೋಕದ ಅನನ್ಯ ವಾಹಿನಿ ಆಕಾಶವಾಣಿಗೀಗ ತೊಂಬತ್ತರ ಹರೆಯ. ಆಕಾಶವಾಣಿಯ ಕಾರ್ಯಕ್ರಮಗಳನ್ನು ಕೇಳಿಸಿಕೊಳ್ಳುವುದೇ ಪುಳಕ ತರುವ ವಿಚಾರ.

# ಆಕಾಶವಾಣಿ 90 ಮಾಧ್ಯಮಲೋಕದ ಗಮ್ಮತ್ತು!

■ ಲತಾ ವಿಶ್ವನಾಥ್ ಉಪ್ಪೋಣಿ

ಕೇಳಿದಿರಲ್ಲ, ನಮ್ಮಲ್ಲಿ ಇಂದಿಗೂ ಇರುಳಿನ ಮುಸುಕು ಸರಿಸಿ ನಸುಕಿನ ಕಣ್ತೆರೆಸುವುದು ಇದೇ ಸುಮಧುರ ಧ್ವನಿ. ಅನುದಿನವೂ ಬಾಲ್ಯ ಮರಳಿಸುವ ಚಂದದೊಂದು ಸುರುಳಿಯಿದು. ಹಳ್ಳಿಯ ನೆಲದಲ್ಲಿ ಹುಟ್ಟಿದ್ದು ಒಂದೆಡೆಯಾದರೆ ಬಹುತೇಕ ದೂರದರ್ಶನದ ದರ್ಶನ ಬಹುದೂರವಿದ್ದ ಕಾಲವದು. ಮಾಹಿತಿ, ಮನರಂಜನೆ, ಜ್ಞಾನಾಭಿವೃದ್ಧಿಗೆ ರೇಡಿಯೊಗಳು ಪುಸ್ತಕದಷ್ಟೇ ಆಪ್ತವಾಗಿ ಮಸ್ತಕ ಸೆಳೆವ ಮಾಧ್ಯಮವಾಗಿತ್ತು. ನಾವಂತೂ ರೇಡಿಯೊ ಅಂದರೆ ಅತ್ಯಂತ ಕೌತುಕ ಹಾಗೂ ಸಂಭ್ರಮದಿಂದ ಕೂತು ಆಲಿಸುವ ಸೌಭಾಗ್ಯ ಹೊಂದಿದ್ದು ಹೆಮ್ಮೆ.

ಕಠಿಣ ಶ್ರಮಜೀವಿಯಾದ ತಂದೆಯವರು ಜೀವನೋಪಾಯಕ್ಕಾಗಿ ಕಲಿತ ದುಡಿಮೆಯ ಹಲವು ಮಾರ್ಗಗಳಲ್ಲಿ ಈ ರೇಡಿಯೊ ರಿಪೇರಿ ಕೂಡ ಒಂದು. ಹಾಗಾಗಿ ನಿತ್ಯ ಈ ರೇಡಿಯೊದ ಸುಮಧುರ ಸ್ವರ ಸಾಮಾನ್ಯವಾಗಿತ್ತು. ಸರಿಸುಮಾರು ಎರಡು ಮೂರನೇ ತರಗತಿ ದಾಟಿದರೂ ಈ ರೇಡಿಯೊದಲ್ಲಿ ಹೇಗೆ ಸ್ವರ ಬರುತ್ತದೆ, ಸಿನಿಮಾ ಹಾಡುಗಳು, ನಾಟಕ, ನೃತ್ಯ, ಸಂಗೀತ ಪಾಠ ಇವೆಲ್ಲಾ ಹೇಗೆ ಸಾಧ್ಯ? ಇಷ್ಟು ಸಣ್ಣ ಡಬ್ಬಿಯೊಳಗೆ ಆ ಕಾರ್ಯಕ್ರಮದ ರೂವಾರಿಗಳು, ಭಾಗಿಗಳು ಹೇಗೆ ಕುಳಿತುಕೊಳ್ತಾರೆ? ಅದು ಹೇಗೆ ಬಿತ್ತರವಾಗುತ್ತದೆ? ನಿಜಕ್ಕೂ ಸೋಜಿಗವೇ ಆಗಿತ್ತು.

ಉತ್ತರಕ್ಕಾಗಿ ಹುಡುಕಾಟ. ಅದಕ್ಕಾಗಿಯೇ ಸಂಜೆ ಶಾಲೆ ಮುಗಿದ ಬಳಿಕ ಬೇಗ ಹೋಂವರ್ಕ್ ಮುಗಿಸಿ ಅಪ್ಪ ರಿಪೇರಿಗಾಗಿ ಬಂದ ರೇಡಿಯೊ ಬಿಚ್ಚುವುದನ್ನು ಕಾಯ್ತಾ ಇದ್ದ ದಿನಗಳಿತ್ತು. ಅಪ್ಪನೋ ಅದು ಬಹಳ ಸೂಕ್ಷ್ಮ ಹಾಗೂ ತದೇಕಚಿತ್ತರಾಗಿ ಮಾಡಬೇಕಾದ ಕೆಲಸವಾದ್ದರಿಂದ ರಾತ್ರಿ ಸಮಯದಲ್ಲೇ ಅದರಲ್ಲಿ ತೊಡಗುತ್ತಿದ್ದರು. ಅದನ್ನು ತೆರೆದು ನೋಡುವ ಅಪ್ಪನ ಶೈಲಿಯೋ! ಕನ್ನಡಕದ ಜೊತೆಗೆ ಒಂದು ಕಣ್ಣಿನ ಕನ್ನಡಕ, ಚಿಮುಟ, ಅದರ ಅತಿ ಸೂಕ್ಷ್ಮ ಸ್ಕ್ರೂವ್‌ಗಳು. ಹತ್ತಿರ ನಿಂತು ನೋಡುವುದಕ್ಕೂ ಭಯ. ಅಪ್ಪ ಬೇರೆ ದೂರ್ವಾಸ ಮಿತ್ರ. ತಣ್ಣಗಿದ್ದಾಗ ನಮ್ಮ ಆಪ್ತಮಿತ್ರ!

ರೇಡಿಯೊ ಅಂದರೇ ಆಕಾಶವಾಣಿ. ಆ ಅಶರೀರ ವಾಣಿ ನಮ್ಮನ್ನು ಸೆಳೆದಿತ್ತು ಬಗೆ ಇಂದಿಗೂ ಯಾವ ಮಾಧ್ಯಮಕ್ಕೂ ಬಹುಶಃ ಆ ಅನನ್ಯ ತಾಕತ್ತು ಇರದೆನಿಸುತ್ತದೆ. ಬೆಳಿಗ್ಗೆ ಆರಂಭವೇ ಅದೊಂದು ನಾದದಿಂದ ಶುರುವಾಗಿ ಅಲ್ಲಿ ಶ್ರೋತೃಗಳಿಗೆ ಶುಭೋದಯ ಕೋರುವಾಗ ಅವರೆಲ್ಲೋ ನಮ್ಮ ಮಗ್ಗುಲಲೇ ಇದ್ದಾರೇನೋ ಅನ್ನುವ ಆಪ್ತತೆ. ತದನಂತರ ದಿನ, ದಿನಾಂಕ, ದಿನದ ವೈಶಿಷ್ಟ್ಯ, ಮಾಸ, ತಿಥಿ, ವಾವ್... ಇನ್ನೇನು ಬೇಕು ದಿನದಾರಂಭಕೆ ಎನಿಸುತ್ತಾ... ವಂದೇ ಮಾತರಂ ಕೇಳಿಸುತ್ತದೆ. ಇಂದಿಗೂ ಎದೆಯಾಳ ಸೇರಿ ರೋಮಾಂಚನ!

## ತಂತಿಯಿಲ್ಲದೆ ಸಂವಹನ

ಇಂತಹ ಅದ್ಭುತ ಮಾಧ್ಯಮಲೋಕದ ಅನನ್ಯ ವಾಹಿನಿ ಆಕಾಶವಾಣಿಯೆನ್ನುವ ಸಂಪತ್ತಿಗೀಗ ತೊಂಬತ್ತರ ಗಮ್ಮತ್ತು. ರೇಡಿಯೊ ಅನ್ನುವುದು ಅತ್ಯಂತ ಹಳೆಯ ಮಾಧ್ಯಮ ಸಾಧನ. ಈ ಮಧುರ ಪದ ರೇಡಿಯಸ್ ಅಥವಾ ವಿಕಿರಣ ಎಂಬ ಪದದಿಂದ ಜನಿತವಾಗಿದ್ದು, ತಂತಿಯಿಲ್ಲದೆ ಸಂವಹನ ಪ್ರಯೋಗಗೊಂಡು ಸಂಗೀತ ಸುದ್ದಿ ಅಥವಾ ವಿವಿಧ ಮನರಂಜನೆಯ ಕಾರ್ಯಕ್ರಮಗಳು ಜನಮಾನಸಕ್ಕೆ ತಲುಪಿಸುವ ಪ್ರಸಾರ ವ್ಯವಸ್ಥೆಯ ಮುನ್ನುಡಿ. ಈ ಒಂದು ವಿಶಿಷ್ಟ ಸಂವಹನ ಮಾಧ್ಯಮಕ್ಕೆ ಭಾರತದಲ್ಲಿ ಆಕಾಶವಾಣಿ ಎನ್ನುವ ಹೆಸರು ಅಂಗೀಕಾರವಾಯಿತು.

ಹೆಸರೇ ಬಿಂಬಿಸುವಂತೆ ಇದು ಆಕಾಶದಿಂದ ಆಲಿಸುವ ಧ್ವನಿ. ಆದ್ದರಿಂದ ಮತ್ತಷ್ಟು ಕುತೂಹಲ ಹಾಗೂ ಕೌತುಕದ ಇಂದ್ರಜಾಲದ ಯಕ್ಷಿಣಿಯ ಡಬ್ಬದಂತೆ ನಮಗಾಗ ಈ ರೇಡಿಯೊ ಅನ್ನುವುದು. ರೇಡಿಯೊ ಹಾಗೂ ಬಹುತೇಕ 1970–80ರ ದಶಕರ ತನಕವೂ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿ ಬಳಕೆಯಲ್ಲಿದ್ದ ಆಕಾಶವಾಣಿಯ ಇತಿಹಾಸ 1936ರಲ್ಲಿ ಆರಂಭ. ಆಕಾಶವಾಣಿ ಪದವನ್ನು ಎಂ.ವಿ. ಗೋಪಾಲಸ್ವಾಮಿ ಎಂಬುವರು ಮೊದಲು ಬಳಸಿದರು. ಇಂದಿಗೂ ಆಕಾಶವಾಣಿಗೆ ಸರಿಸಾಟಿಯಾದ ಸ್ಪಷ್ಟ ವಾರ್ತಾ ಪ್ರಸಾರ, ಕಾರ್ಯಕ್ರಮದ ಗುಣಮಟ್ಟ ಬಹುಶಃ ಮತ್ತೆಲ್ಲೂ ಕಾಣಲಾರದು. ಇಂದಿಗೂ ನಿತ್ಯ ನಸುಕಿಗೆ ಆಕಾಶವಾಣಿ ಆಲಿಸುವ ನನಗೆ ಮತ್ತೆ ಮತ್ತೆ ಬಾಲ್ಯ ನೆನಪಿಸುತ್ತದೆ. 'ವಾರ್ತೆಗಳು ಓದುತ್ತಿರುವವರು ನಾಗೇಂದ್ರರಾವ್' ಎಂದಾಗ ಅವರು ಕಣ್ಣ ಮುಂದೆ ನಿಲ್ಲುತ್ತಾರೆ. ಬಾಲ ಜಗತ್ತು, ವನಿತಾ ವಿಹಾರ, ಚಿಗುರು. ಯುವ ವಾಣಿ, ಮಕ್ಕಳಿಗೆ ಸಂಗೀತ ಹೇಳಿ ಕೊಡುವುದು, ರೈತರಿಗೆ ಸಲಹೆಗಳು ಕೇಳಿದ್ದು ಇನ್ನೂ ಹಸಿರಾಗಿದೆ.

ಇಂತಹ ಆಕಾಶವಾಣಿ ಈಗ ತೊಂಬತ್ತು ತುಂಬಿದ ಸಂಪತ್ತಾಗಿದೆ. ಮನೆಮನೆಯ ಜಗುಲಿಯಲ್ಲಿ ಜನಜಂಗುಳಿ ಸೇರಿಸಿ ವಾರ್ತೆ ಸುದ್ದಿ ರಂಜನೆಯನಿತ್ತ ಆಕಾಶವಾಣಿ ಈಗಿನ ಮಕ್ಕಳಿಗೆ ಬೇಡವೆನಿಸಿರಬಹುದು, ಆದರೆ 'ಹಳೆಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು' ಎಂಬುದು ನಿತ್ಯಸತ್ಯ ಅಲ್ಲವೇ? ■